KADG010010962019

Presented on : 07-03-2019
Registered on : 07-03-2019
Decided on : 22-08-2025
Duration : --

**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ದಾವಣಗೆರೆ**.**

ಶ್ರೀಯುತ: ಎಂ**.**ಹೆಚ್**.** ಅಣ್ಣಯ್ಯನವರ
ಬಿಕಾಂ.ಎಲ್.ಎಲ್.ಬಿ. (ವಿಶೇಷ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿನಾಂಕ**: 22** ನೇ ಆಗಸ್ಟ್ ಮಾಹೆ **2025.**

ಅಸಲು ದಾವಾ ಸಂಖ್ಯೆ ಃ **02/2019**

ವಾದಿ ಃ**-**

ಮಂಜಣ್ಣ ಬಿನ್ ಲೇಟ್ ದೊಡ್ಡ ಸೂರಯ್ಯ ಮತ್ತು ಇತರರು

// ವಿರುದ್ಧ //

ಪ್ರತಿವಾದಿ ಃ**-**

ನಿಜಲಿಂಗಪ್ಪ ಬಿನ್ ಪಾಲಯ್ಯ ಮತ್ತು ಇನ್ನೊಬ್ಬರು

ಮಧ್ಯಂತರ ಅರ್ಜಿ **5** ರ ಮೇಲೆ ಆದೇಶ

**1** ನೇ ಪ್ರತಿವಾದಿ**/**ಅರ್ಜಿದಾರರು ಃ -

ನಿಜಲಿಂಗಪ್ಪ ಬಿನ್ ಪಾಲಯ್ಯ

**(**ಅರ್ಜಿದಾರರ ಪರವಾಗಿ ಃ ಶ್ರೀ ಎಂ**.**ಹೆಚ್**./**ಕೆ**.**ಸಿ**.**ಕೆ**.** ವಕೀಲರು**)**

// ವಿರುದ್ಧ //

<u>ಎದುರುದಾರರು/ವಾದಿ</u> ಃ-

ಕೆ.ನಾಗರಾಜ ಮತ್ತು ಇತರರು

**(1** ನೇ ಪ್ರತಿವಾದಿ ಪರವಾಗಿ ಃ ಶ್ರೀ ಎಂ**.**ಬಿ**.**ವಿ**.** ವಕೀಲರು**)**

**(2** ನೇ ಪ್ರತಿವಾದಿ **-**ಏಕಪಕ್ಷೀಯ**)**

<u>: ಮಧ್ಯಂತರ ಅರ್ಜಿ **5** ರ ಮೇಲೆ ಆದೇಶ :</u>

1 ನೇ ಪ್ರತಿವಾದಿ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ 5 ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 7 ನಿಯಮ 11(ಡಿ) ರ ಅಡಿಯಲ್ಲಿ ಅರ್ಜಿ ಪ್ರಮಾಣ ಪತ್ರ ಸಲ್ಲಿಸಿ ವಾದಿಯು ಸಲ್ಲಿಸಿದ ದಾವೆ ಕಾನೂನು ಬಾಹಿರ ಅಥವಾ ಕಾಲಮಿತಿ ಬಾಧಕ ಇರುವುದರಿಂದ ಸದರಿ ದಾವೆಯನ್ನು ತಿರಸ್ಕರಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

**2.** ಸದರಿ ಅರ್ಜಿಗೆ ವಾದಿ ಪರ ವಕೀಲರು ತಕರಾರು ಸಲ್ಲಿಸಿ, ಅರ್ಜಿ, ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ಸಕಾರಣಗಳಿಂದ ಕೂಡಿರುವುದಿಲ್ಲ. ವಾದಿ ವಿಚಾರಣಾ ನ್ಯಾಯಾಲಯದ ವಾದಪತ್ರವನ್ನು ಹಿಂತಿರುಗಿಸಿದ್ದು ಪುನಃ ದಾವೆ ದಾಖಲು ಮಾಡಲು ಅನುಮತಿ ಕೊಟ್ಟ ಅಧಾರದ ಮೇಲೆ ದಾವೆ ದಾಖಲು ಮಾಡಲಾಗಿರುತ್ತದೆ. ಆದ್ದರಿಂದ ಪ್ರತಿವಾದಿ ಸಲ್ಲಿಸಿದ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

**3.** ಅರ್ಜಿ, ತಕರಾರು ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ.

ಅಂಶ 1ಃ 1 ನೇ ಪ್ರತಿವಾದಿ ಪರ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 7 ನಿಯಮ 11(ಡಿ)ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ 5 ನ್ನು ಪುರಸ್ಕರಿಸಬಹುದೇ ?

ಅಂಶ 2 ಃ ಯಾವ ಆದೇಶ?

**4.** ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

ಅಂಶ 1ಃ ನಕಾರಾತ್ಮಕವಾಗಿ

ಅಂಶ 2ಃ ಕೊನೆಯ ಆದೇಶದಂತೆ ಃ

ಃ <u>ಕಾರಣಗಳು</u> ಃ

**5.** <u>ಅಂಶ **1**</u>ಃ- ಅರ್ಜಿ, ಪ್ರಮಾಣ ಪತ್ರ ಹಾಗೂ ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 7 ನಿಯಮ 11 ಕಾನೂನನ್ನು ಪರಿಶೀಲಿಸಲಾಗಿ, ವಾದಿ ಸಲ್ಲಿಸಿದ ದಾವೆಯನ್ನು ತಿರಸ್ಕರಿಸಬೇಕಾದಲ್ಲಿ ಈ ಕೆಳಕಂಡಂತಹ ಅಂಶಗಳು ಇರಬೇಕಾಗುತ್ತದೆ.

ಎ) ವಾದಿ ಸಲ್ಲಿಸಿದ ದಾವೆಗೆ ವ್ಯಾಜ್ಯ ಕಾರಣ ಇಲ್ಲದೇ ಇದ್ದಾಗ,

ಬಿ) ವಾದಿ ದಾವಾ ಆಸ್ತಿಯ ಮೌಲ್ಯವನ್ನು ಸಮರ್ಪಕವಾಗಿ ಪರಿಗಣಿಸದೇ ಕಡಿಮೆ ಮೌಲ್ಯ ತೋರಿಸಿದಾಗ,

ಸಿ) ಸಮರ್ಪಕವಾದಂತಹ ನ್ಯಾಯಾಲಯದ ಶುಲ್ಕವನ್ನು ತುಂಬಿಲ್ಲದೇ ಇದ್ದಾಗ,

ಡಿ) ವಾದಿ ಸಲ್ಲಿಸಿದ ದಾವೆ ಕಾನೂನು ಬಾಹಿರವಾಗಿದ್ದಾಗ ಅಥವಾ ಕಾಲಮಿತಿ ಬಾದಕ ಇದ್ದಾಗ,

ಇ) ವಾದಿ ದಾವೆ ದಾಖಲು ಮಾಡುವಾಗ ವಾದಪತ್ರಗಳನ್ನು ದ್ವಿಪ್ರತಿಯಲ್ಲಿ ಸಲ್ಲಿಸದೇ ಇದ್ದಾಗ,

ಎಫ್) ವಾದಿ ನಿಯಮ 9 ರ ಕಾನೂನ್ನು ಪಾಲಿಸದೇ ಇದ್ದಾಗ ವಾದಿ ಸಲ್ಲಿಸಿದ ದಾವೆಯನ್ನು ತಿರಸ್ಕರಿಸತಕ್ಕದ್ದು ಅಂತ ಸ್ಪಷ್ಟವಾದ ಕಾನೂನು ಇರುತ್ತದೆ.

**6.** ಈ ಮೇಲ್ಕಂಡ ಅಂಶಗಳಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿ ತನ್ನ ಪ್ರಮಾಣಪತ್ರದಲ್ಲಿ, 4 ನೇ ವಾದಿ ಸಿವಿಲ್ ಜಡ್ಜ ನ್ಯಾಯಾಲಯ ಜಗಳೂರಿನಲ್ಲಿ ಅಸಲು

ದಾವಾ ನಂ.23/2017 ಘೋಷಣಾತ್ಮಕ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ದಾಖಲು ಮಾಡಿದ್ದು, ವಿಚಾರಣಾ ನ್ಯಾಯಾಲಯವು ಹಿಂದೂ ಧರ್ಮ ದತ್ತಿ ಕಾನೂನು 1977 ಕಲಂ 68 ರ ಪ್ರಕಾರ ಸದರಿ ದಾವೆ ವಿಚಾರಣೆ ಮಾಡಲು ನ್ಯಾಯಾಲಯದ ವ್ಯಾಪ್ತಿ ಇರುವುದಿಲ್ಲ ಅಂತ ಪರಿಗಣಿಸಿ ಪ್ರಾಥಮಿಕ ವಿವಾದಾಂಶವನ್ನು ರಚನೆ ಮಾಡಿ ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 7 ನಿಯಮ 10 ರಡಿಯಲ್ಲಿ ವಾದಪತ್ರವನ್ನು ವಾಪಸ್ಸು ಕೊಡಲಾಗಿರುತ್ತದೆ. ಸದರಿ ಆದೇಶವನ್ನು ವಾದಿ ಪಾಲಿಸಿಲ್ಲದೇ ಇರುವುದರಿಂದ ವಾದಿ ಸಲ್ಲಿಸಿದ ದಾವೆಯನ್ನು ತಿರಸ್ಕರಿಸಬೇಕೆಂದು ಪ್ರಮಾಣಪತ್ರ ಸಲ್ಲಿಸಿರುತ್ತಾರೆ. ಈ ಅಂಶಗಳು ಮೇಲೆ ಹೇಳಿದ ಎ ದಿಂದ ಎಫ್ ನಲ್ಲಿ ನಮೂದಿಸಿದ ಅಂಶಗಳು ಅನ್ವಯವಾಗುವುದಿಲ್ಲ.

**7.** ವಾದಿಯು ಹಾಜರುಪಡಿಸಿದ ನಿಶಾನೆ ಪಿ.1 ವಿಚಾರಣಾ ನ್ಯಾಯಲಯವು ಅಸಲು ದಾವಾ ನಂ.23/2017 ನ್ನು ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ದಾಖಲು ಮಾಡಿದ್ದು ಸದರಿ ದಾವೆಗೆ 1 ನೇ ಪ್ರತಿವಾದಿ ತಕರಾರು ಸಲ್ಲಿಸಿ ಸದರಿ ದಾವೆ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ ಅಂತ ಹೇಳಿದಾಗ ವಿಚಾರಣಾ ನ್ಯಾಯಾಲಯವು ಪ್ರಾಥಮಿಕ ವಿವಾದಾಂಶ ರಚನೆ ಮಾಡಿ ದಿಃ14/09/2018 ರಂದು ಪ್ರಾಥಮಿಕ ವಿವಾದಾಂಶ ನಕಾರಾತ್ಮಕವಾಗಿ ಉತ್ತರಿಸಿ ವಾದಿ ಸಲ್ಲಿಸಿದ ದಾವೆ ಅಥವಾ 2 ನೇ ಪ್ರತಿವಾದಿಯು ಎದುರು ಕ್ಲೇಮನ್ನು ನಡೆಸುವ ಅಧಿಕಾರ ವ್ಯಾಪ್ತಿಯನ್ನು ನಡೆಸಲು ಮಾನ್ಯ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಹೊಂದಿಲ್ಲ ಎಂದು ನ್ಯಾಯಲಯವು ತೀರ್ಮಾನಿಸಿದೆ. ಅದೇ ಪ್ರಕಾರ ವಾದಪತ್ರವನ್ನು ವಾದಿಗೆ ಹಿಂದಿರುಗಿಸಲು ಮತ್ತು ಎದುರು ಕ್ಲೇಮನ್ನು 2 ನೇ ಪ್ರತಿವಾದಿಗೆ ಹಿಂದಿರುಗಿಸಲು ಆದೇಶಿಸಲಾಗಿದೆ ಮತ್ತು ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಲು ಪಕ್ಷಗಾರರಿಗೆ ಸೂಚಿಸಲಾಗಿದೆ. ಈ ಆದೇಶ ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ವಾದಿಯರಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಲು ಅನುಮತಿ ನೀಡಿದ್ದು ಆ ಆಧಾರದ ಮೇಲೆ ವಾದಿ ಈ ದಾವೆ ದಾಖಲು ಮಾಡಿರುತ್ತಾರೆ. ಆದ್ದರಿಂದ ವಾದಿಯು ಸಲ್ಲಿಸಿದಂತಹ ದಾವೆಗೆ ವ್ಯಾಜ್ಯ ಕಾರಣ ಇರುತ್ತದೆ. ಕಾನೂನು ಬಾಧಕ ಇರುವುದಿಲ್ಲ. ಆದ್ದರಿಂದ 1 ನೇ ಪ್ರತಿವಾದಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳು ನ್ಯಾಯಸಮ್ಮತವಾಗಿರುವುದಿಲ್ಲ ಅದ್ದರಿಂದ ವಾದಿಯು ಸಲ್ಲಿಸಿದಂತಹ ವಾದಪತ್ರವನ್ನು

ತಿರಸ್ಕರಿಸಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಸದರಿ ಅಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.

**8.** <u>ಅಂಶ **2**</u>- ಈ ಕೆಳಗಿನಂತೆ ಆದೇಶ.

<u>ಆದೇಶ</u>

1 ನೇ ಪ್ರತಿವಾದಿ ಪರ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ ಆಜ್ಞೆ 7 ನಿಯಮ 11(ಡಿ) ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ 5 ನ್ನು ವಜಾ ಮಾಡಲಾಯಿತು.

ಖರ್ಚಿನ ಮೇಲೆ ಯಾವುದೇ ಆದೇಶವಿಲ್ಲ.

(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕೀಕೃತ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ತಿದ್ದಿ, ಓದಿ ತಿದ್ದಿ ಇದೇ ದಿನಾಂಕ: 22 ನೇ ಆಗಸ್ಟ್ ಮಾಹೆ 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

M H ANNAYYANAVAR
Digitally signed by M H ANNAYYANAVAR
Date: 2025.08.22 17:46:16 +0530

(ಎಂ.ಹೆಚ್. ಅಣ್ಣಯ್ಯನವರ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.